ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 38/2012

**(ಚಾ.ಸಾ.2 ಪ್ರಾ.ಸಾ.2)**

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು

ದಿನಾಂಕಃ 11-02-2016

| | |
|---|---|
| ಸಾಕ್ಷಿದಾರರ ಹೆಸರು | ಃ ಆನಂದ್ |
| ತಂದೆಯ ಹೆಸರು | ಃ ಕುಪ್ಪಸ್ವಾಮಿ |
| ವಯಸ್ಸು | ಃ 48 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸ | ಃ ಬೊಮ್ಮಸಂದ್ರ |

ಮುಖ್ಯವಿಚಾರಣೆ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ನಾನು ಬೊಮ್ಮಸಂದ್ರ ಜನತಾ ಕಾಲೋನಿಯಲ್ಲಿ ಕೋಳಿ ಮತ್ತು ಹಂದಿ ಮಾಂಸ ಮಾರಾಟ ಮಾಡುವ ಅಂಗಡಿ ಇಟ್ಟುಕೊಂಡಿದ್ದೇನೆ . ಚಾ.ಸಾ. 3 ರವರು ನನ್ನ ಹೆಂಡತಿ. ನಮಗೆ ಮೂರು ಜನ ಮಕ್ಕಳು . ಮೊದಲನೆಯವನು ಮಂಜುನಾಥ , ಎರಡನೆಯವರು ವಿಜಯಕಾಂತ , ಮೂರನೇಯವನು ಅಜೇಯ್. ನಾವು ಹಂದಿ ಜೋಗಿ ಜಾತಿಗೆ ಸೇರಿದ್ದು , ಅದು ಪರಿಶಿಷ್ಟ ಜಾತಿಗೆ ಬರುತ್ತದೆ .ನಾನು ಆರೋಪಿಗಳನ್ನು ನೋಡಿದ್ದೇನೆ . ಆರೋಪಿಗಳಲ್ಲಿ ಕೆಲವರು ನಮ್ಮ ಏರಿಯಾದವರು ಮತ್ತು ಕೆಲವರು ಬೇರೆ ಏರಿಯಾದವರು ಇದ್ದಾರೆ . 1ನೇ ಆರೋಪಿ ನಮ್ಮ ಜಾತಿಯವನು . ಉಳಿದ ಆರೋಪಿಗಳೆಲ್ಲಾ ಮೇಲು ಜಾತಿಯವರು .

ದಿನಾಂಕಃ 28.02.2012 ಕ್ಕಿಂತ 15 ದಿವಸ ಮುಂಚೆ ನನ್ನ ಮಗ ಮಂಜುನಾಥನಿಗೂ 1ನೇ ಆರೋಪಿಗೂ ಗಲಾಟೆಯು ಆಗಿತ್ತು . ದಿನಾಂಕಃ 28.02.2012 ರಂದು ರಾತ್ರಿ 9.00 ಗಂಟೆಗೆ ನಾನು , ನನ್ನ ಮಗ ವಿಜಯಕಾಂತ ಅಂಗಡಿಯಲ್ಲಿ ಇದ್ದೆವು , ನನ್ನ ಹೆಂಡತಿ ಮನೆಯಲ್ಲಿ ಇದ್ದಳು , ನನ್ನ ಇನ್ನೊಬ್ಬ ಮಗ ಚಂದಾಪುರಕ್ಕೆ

ಕೋಳಿ ತರಲು ಹೋಗಿದ್ದನು . ನನ್ನ ಮನೆಗೂ ನನ್ನ ಅಂಗಡಿಗೂ 300 ಅಡಿಗಳ ದೂರವಾಗುತ್ತದೆ . ಆ ದಿವಸ ನಾನು ಮತ್ತು ವಿಜಯಕಾಂತ ಅಂಗಡಿಯಲ್ಲಿ ಇದ್ದಾಗ 1ನೇ ಆರೋಪಿ ರಂಜಿತ ನಮ್ಮ ಅಂಗಡಿಯ ಹತ್ತಿರ ಬಂದು ಎಲ್ಲೋ ನಿನ್ನ ಮಗ ಮಂಜುನಾಥ ಎಂದು ನಮ್ಮನ್ನು ಕೇಳಿದನು . ಅಷ್ಟರಲ್ಲಿ ನನ್ನ ಮಗ ಮಂಜುನಾಥ ಚಂದಾಪುರದಿಂದ ಕೋಳಿ ತೆಗೆದುಕೊಂಡು ಅಂಗಡಿಗೆ ಬಂದನು . ಆಗ ಆರೋಪಿಗಳೆಲ್ಲಾ ಸೇರಿಕೊಂಡು ನನ್ನ ಮಗ ಮಂಜುನಾಥನಿಗೆ ಹೊಡೆಯಲು ಬಂದರು . ನನ್ನ ಹೆಂಡತಿ ಶಬ್ದ ಕೇಳಿ ಅಂಗಡಿಯ ಹತ್ತಿರ ಬಂದಳು . ನಾವುಗಳು ಬೆಳಿಗ್ಗೆ ಮಾತನಾಡೋಣ ಎಂದು ನಮ್ಮ ಮನೆಯ ರಸ್ತೆಯಲ್ಲಿ ನನ್ನ ಮಗ ಮಂಜುನಾಥನನ್ನು ಕರೆದುಕೊಂಡು ಹೋಗುತ್ತಿದ್ದಾಗ ಆರೋಪಿಗಳೆಲ್ಲಾ ನನಗೆ ಕೈಯಲ್ಲಿ , ಕಾಲಿನಲ್ಲಿ ಹೊಡೆದುಕೊಂಡು ಬರುತ್ತಿದ್ದರು . ಅದನ್ನು ನೋಡಿ ನನ್ನ ಹೆಂಡತಿ ನನ್ನ ಮಗ ಮಂಜುನಾಥನನ್ನು ಮನೆಯ ಒಳಗೆ ಕರೆದುಕೊಂಡು ಹೋದಳು . ನನ್ನನ್ನು ಆರೋಪಿಗಳೆಲ್ಲಾ ಹಿಡಿದು ಹೊಡೆಯುತ್ತಿದ್ದರು 1ನೇ ಆರೋಪಿ ಚಾಕು ತೆಗೆದು ನನ್ನ ಬಲಭುಜದ ಕೆಳಗೆ ತಿವಿದನು. ನನ್ನನ್ನು ನನ್ನ ಹೆಂಡತಿ ಮತ್ತು ನನ್ನ ಮಗ ಮಂಜುನಾಥ ಮತ್ತು ವಿಜಯಕಾಂತ ವೆಂಕಟೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋದರು . ಅಲ್ಲಿ ನಾನು ಚಿಕಿತ್ಸೆ ಪಡೆಯುತ್ತಿದ್ದೆನು . ನಾನು ನನ್ನ ಚಿಕ್ಕ ಮಗ ವಿಜಯಕಾಂತನಿಗೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟು ಬಾ ಎಂದು ಹೇಳಿದೆನು , ಅವನು ಠಾಣೆಗೆ ಹೋಗಿ ದೂರು ಕೊಟ್ಟು ಬಂದನು .

ನನ್ನ ಮಗ ವಿಜಯಕಾಂತ ಠಾಣೆಯಿಂದ ಆಸ್ಪತ್ರೆಯ ಹತ್ತಿರ ಬಂದಾಗ ಆರೋಪಿಗಳೆಲ್ಲಾ ಅವನ ಮೇಲೆ ಹಲ್ಲೆ ಮಾಡಿದರು . ನನ್ನ ಮಗ ಮಂಜುನಾಥ ಆಸ್ಪತ್ರೆಯಲ್ಲಿ ನನ್ನ ಬಳಿ ಇದ್ದನು . ನನ್ನ ಮಗ ವಿಜಯಕಾಂತ್ ಹಲ್ಲೆ ನಡೆದ ನಂತರ ನನ್ನ ಬಳಿ ಓಡಿಬಂದಾಗ ನನ್ನ ಮಗ ಮಂಜುನಾಥ ಆಸ್ಪತ್ರೆಯಿಂದ ಹೊರಬಂದನು .

ಆರೋಪಿಗಳು ನಮಗೆ ವಿಜಯಕಾಂತ್ ಬೇಕಾಗಿಲ್ಲ , ನೀನೇ ಬೇಕು ಎಂದು ಆರೋಪಿಗಳು ಅವರ ಕೈಯಲ್ಲಿ ಹಿಡಿದಿದ್ದ ಲಾಂಗ್ ಮತ್ತು ಚಾಕುವಿನಿಂದ ನನ್ನ ಮಗ ಮಂಜುನಾಥನಿಗೆ ಹೊಡೆದಿದ್ದಾರೆ . ನನ್ನ ಮಗ ತಪ್ಪಿಸಿಕೊಳ್ಳಲು ಓಡಿ ಹೋಗಿದ್ದಾನೆ . ಅವನ ಹಿಂದೆ ಆರೋಪಿಗಳೆಲ್ಲಾ ಓಡಿ ಹೋಗಿದ್ದಾರೆ . ಇವರುಗಳು ಮುಂದೆ ಓಡುತ್ತಿದ್ದಾಗ ನನ್ನ ಇನ್ನೊಬ್ಬ ಮಗ ವಿಜಯಕಾಂತ ಅವರುಗಳ ಹಿಂದೆ ಓಡಿದ್ದಾನೆ .

ಆದಾದ ಅರ್ಧ ಗಂಟೆಗೆ ನನ್ನ ಮಗ ವಿಜಯಕಾಂತ ಆಸ್ಪತ್ರೆಗೆ ಬಂದು 1ನೇ ಆರೋಪಿ ನನ್ನ ಮಗ ಮಂಜುನಾಥನಿಗೆ ಚಾಕುವಿನಿಂದ ಬೆನ್ನಿಗೆ ತಿವಿದನು , 4ನೇ ಆರೋಪಿ ಸಂದೀಪ 1ನೇ ಆರೋಪಿಯಿಂದ ಚಾಕು ತೆಗೆದುಕೊಂಡು ಮಂಜುನಾಥನಿಗೆ ಚಾಕುವಿನಿಂದ ಎದೆಗೆ ತಿವಿದನು , ಆರೋಪಿ ಶಿವು ಚಾಕುವಿನಿಂದ ಮಂಜುನಾಥನ ಎದೆಗೆ ತಿವಿದನು , ಆರೋಪಿ ನಾಗ ಲಾಂಗ್‌ನಿಂದ ಮಂಜುನಾಥನ ಕಾಲಿಗೆ ಬೀಸಿ ಹೊಡೆದನು ಎಂದು ನನಗೆ ತಿಳಿಸಿದನು . ಇದರಿಂದ ನನ್ನ ಮಗ ಮಂಜುನಾಥ ಗಾಯಗೊಂಡು ರಕ್ತದ ಮಡುವಿನಲ್ಲಿ ಆಸ್ಪತ್ರೆಯ ಹಿಂಭಾಗ ಬಿದ್ದಿದ್ದಾನೆಂದು ವಿಜಯಕಾಂತ ನನಗೆ ತಿಳಿಸಿದನು . ನನ್ನನ್ನು ನೋಡಲು ಬಂದಿದ್ದ ಗುರುಸ್ವಾಮಿ ಮತ್ತು ಅಂಥೋನಿ , ಒಬ್ಬ ಆಸ್ಪತ್ರೆಯ ಸಿಬ್ಬಂದಿ ಆ ಸ್ಥಳಕ್ಕೆ ಹೋಗಿ ಮಂಜುನಾಥನನ್ನು ವೆಂಕಟೇಶ್ವರ ಆಸ್ಪತ್ರೆಗೆ ಎತ್ತಿಕೊಂಡು ಬಂದರು . ಆಗ ಅಲ್ಲಿದ್ದ ವೈದ್ಯರು ಅಲ್ಲಿ ಚಿಕಿತ್ಸೆ ಕೊಡಲು ಆಗುವುದಿಲ್ಲವೆಂದು ಸ್ಪರ್ಶ ಆಸ್ಪತ್ರೆಗೆ ಹೋಗಲು ಹೇಳಿದರು . ಸ್ಪರ್ಶ ಆಸ್ಪತ್ರೆಯಲ್ಲಿ ವೈದ್ಯರು ಮಂಜುನಾಥನನ್ನು ಪರೀಕ್ಷೆ ಮಾಡಿ ಅವನು ಸತ್ತು ಹೋಗಿದ್ದಾನೆಂದು ಹೇಳಿದರು . ನಂತರ ನನ್ನ ಮಗ ವಿಜಯಕಾಂತ ಪೊಲೀಸ್ ಠಾಣೆಗೆ ಹೋಗಿ ಮಂಜುನಾಥನನ್ನು ಕೊಲೆ ಮಾಡಿರುವ ಬಗ್ಗೆ ದೂರನ್ನು ಕೊಟ್ಟಿದ್ದಾನೆ .

ನನ್ನ ಮಗ ಮಂಜುನಾಥನ ಶವ ಆಸ್ಪತ್ರೆಯಲ್ಲಿ ಇತ್ತು . ಪೊಲೀಸರು ಶವ ಮಹಜರನ್ನು ಮಾಡಿ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು . ದಿನಾಂಕಃ

29.02.2012 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಸಿದರು . ಅಲ್ಲಿ ನನ್ನ ಮಗನ ಬಟ್ಟೆಗಳನ್ನು ನನಗೆ ತೋರಿಸಿದರು . ಘಟನೆಯಾದ ನಾಲ್ಕು ದಿನಗಳ ನಂತರ ಮತ್ತೆ ನನ್ನನ್ನು ಪೊಲೀಸರು ಠಾಣೆಗೆ ಕರೆಸಿ ಆರೋಪಿಗಳಾದ ರಂಜಿತ , ಶಿವು , ಸಂದೀಪ , ನಾಗ ಇವರುಗಳನ್ನು ನನಗೆ ತೋರಿಸಿದರು . ನಾನು ಅವರುಗಳನ್ನು ಗುರ್ತಿಸಿದೆನು . ಆ ಸಮಯದಲ್ಲಿ ನಾನು ಗಾಬರಿಯಲ್ಲಿ ಇದ್ದುದ್ದರಿಂದ ಉಳಿದ ಆರೋಪಿಗಳ ಹೆಸರುಗಳನ್ನು ಹೇಳಲಿಲ್ಲ . ನನಗೆ ಉಳಿದ ಆರೋಪಿಗಳ ಹೆಸರುಗಳು ಗೊತ್ತಿಲ್ಲ , ಮುಖ ನೋಡಿದರೆ ಗುರ್ತಿಸುತ್ತೇನೆ ಎಂದು ಪೊಲೀಸರಿಗೆ ಹೇಳಿದೆನು . ನಂತರ ನನ್ನ ಮಗನ ಶವವನ್ನು ಸಂಸ್ಕಾರ ಮಾಡಿದೆವು .

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಸಾಕ್ಷಿಯ ಪಾಟೀ ಸವಾಲನ್ನು ಉಳಿದ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಮಾಡುವುದಾಗಿ ಅರ್ಜಿಗಳನ್ನು ಸಲ್ಲಿಸಿದ್ದು , ಅರ್ಜಿಗಳನ್ನು ಪುರಸ್ಕರಿಸಿ ಪಾಟೀ ಸವಾಲನ್ನು ಮುಂದೂಡಲಾಯ್ತು .

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಬಿ.ವಿ. ರೇಣುಕ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.